# ಬಿ.ಎ.ಜೆ.ಎಸ್.ಎಸ್. ಕಲಾ ಮತ್ತು ವಾಣಿಜ್ಯ ಮಹಿಳಾ ಮಹಾವಿದ್ಯಾಲಯ ರಾಣೇಬೆನ್ನೂರು – 581115.

## ನೇಮಕಾತಿ / ಅಧಿಸೂಚನೆ

ಸರ್ಕಾರದ ಆದೇಶ ಸಂಖ್ಯೆ: ಇಡಿ 327 ಯುಪಿಸಿ 2019(ಇ) ಬೆಂಗಳೂರು, ದಿನಾಂಕ:30-08-2024 ರಲ್ಲಿ ಅನುಮತಿ ನೀಡಿರುವಂತೆ ಹಾಗೂ ಕಾಲೇಜು ಶಿಕ್ಷಣ ಇಲಾಖೆಯವರ ಪತ್ರ ಸಂಖ್ಯೆ:ಕಾಶಿಇ/50/ಹುಪ/2019-20/ಧಾವಿ/ಸೇವಿ-02 ಬೆಂಗಳೂರು ದಿನಾಂಕ:05-10-2024 ಹಾಗೂ ಕಾಶಿಇ/ಪ್ರಾಕಧಾ/80/ಹೊವಿವೇಅ/ಜಿಇಎಸ್-2/2019-20/10520ಧಾರವಾಡ,ದಿನಾಂಕ:18-10-2024 ರ ಚಾಲನಾ ಆದೇಶದಂತೆ ನಮ್ಮ ಅನುದಾನಿತ ಪದವಿ ಮಹಿಳಾ ಮಹಾವಿದ್ಯಾಲಯದಲ್ಲಿ ಖಾಲಿ ಇರುವ ಈ ಕೆಳಕಂಡ ಸಹಾಯಕ ಪ್ರಾಧ್ಯಾಪಕ ಹುದ್ದೆಯ ನೇಮಕಾತಿ ಮಾಡಿಕೊಳ್ಳಲು ಅನುಮತಿ ನೀಡಿರುತ್ತಾರೆ. ಕಾರಣ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

| ಕ್ರ.ಸಂ | ವಿಷಯ | ಖಾಲಿ ಇರುವ ಹುದ್ದೆಗಳು | ಮೀಸಲಾತಿ | ಗರಿಷ್ಠ ವಯೋಮಿತಿ | ವಿದ್ಯಾರ್ಹತೆ |
|---|---|---|---|---|---|
| 01 | ಗಣಕ ಯಂತ್ರ ವಿಜ್ಞಾನ | 01 ಸಹಾಯಕ ಪ್ರಾಧ್ಯಾಪಕ | ಏಕವ್ಯಕ್ತಿ ವಿಭಾಗ ಮೀಸಲಾತಿ ಅನ್ವಯಿಸುವುದಿಲ್ಲಾ | ಸರ್ಕಾರದ ಆದೇಶದ ಪ್ರಕಾರ ಪರಿಗಣಿಸಲಾಗುವುದು | UGC ನಿಯಮಗಳು ಅನ್ವಯಿಸುತ್ತವೆ. |

ನಿಬಂಧನೆಗಳು :

1. ಅಭ್ಯರ್ಥಿಗಳು ಸಂಬಂಧಿಸಿದ ವಿಷಯದಲ್ಲಿ ಯುಜಿಸಿ ಅಧಿಸೂಚನೆ ಸಂಖ್ಯೆ: F.1-2/2017(EC/PS) ದಿನಾಂಕ 18.07.2018 ರ ಪ್ರಕಾರ ಸ್ನಾತಕೋತ್ತರ ಪದವಿಯೊಂದಿಗೆ NET/SLET/Ph.D ಪಾಸಾಗಿರಬೇಕು Ph.D ಪದವಿಯನ್ನು ಪಡೆದಿರುವ ಅಭ್ಯರ್ಥಿಗಳಿಗೆ NET/SLET ಪರೀಕ್ಷೆಯಿಂದ ವಿನಾಯಿತಿ ಇರುತ್ತದೆ. ಪಿಹೆಚ್.ಡಿ ಪದವಿಯನ್ನು ಕೋರ್ಸ್‌ವರ್ಕ್‌ದೊಂದಿಗೆ ಪಡೆದಿರಬೇಕು. ಒಂದು ವೇಳೆ ದಿನಾಂಕ :11-07-2009 ರ ಪೂರ್ವದಲ್ಲಿ ಪಿಹೆಚ್. ಡಿ. ಪಡೆದಿದ್ದಲ್ಲಿ/ಪಿ.ಹೆಚ್.ಡಿ. ಪದವಿ ನೋಂದಣಿ ಮಾಡಿಸಿದ್ದಲ್ಲಿ ಅಂತಹ ಅಭ್ಯರ್ಥಿಗಳು ದಿನಾಂಕ : 04-05-2016 ರ ಯುಜಿಸಿ ಅಧಿಸೂಚನೆಯಲ್ಲಿ ಹೊರಡಿಸಿರುವ ನಿಯಮಗಳನ್ನು ಪೂರೈಸುವ ಷರತ್ತುಗಳಿಗೆ ಒಳಪಟ್ಟಿರುತ್ತದೆ. ದಿನಾಂಕ:11-7-2009ರ ನಂತರ ಯಾವುದೇ ನೇಮಕಾತಿಗೆ ಎಂ. ಫಿಲ್ ವಿದ್ಯಾರ್ಹತೆ ಪರಿಗಣಿಸುವುದಿಲ್ಲ.
2. ವೇತನ ಶ್ರೇಣಿ ಮತ್ತು ಇತರೆ ಸೇವಾ ನಿಬಂಧನೆಗಳು ಯು.ಜಿ.ಸಿ. ನಿಯಮಾವಳಿ ಹಾಗೂ ಕರ್ನಾಟಕ ರಾಜ್ಯ ಸರ್ಕಾರದ ನಿಯಮಾವಳಿಗಳನ್ವಯ ಇರುತ್ತದೆ.
3. ಸರ್ಕಾರದ ಸೇರ್ಪಡೆ ಆದೇಶದ ಸಂಖ್ಯೆ ಇಡಿ/87-ಯುಪಿಸಿ/2016 ರ ಅನ್ವಯ ಖಾಸಗಿ ಅನುದಾನಿತ ಪದವಿ ಕಾಲೇಜುಗಳಲ್ಲಿ ಪೂರ್ಣಕಾಲಿಕ ಬೋಧನಾನುಭವ ಹೊಂದಿರುವ ಸೇವಾವಧಿ ಅಥವಾ ಐದು ವರ್ಷಗಳು ಇವುಗಳಲ್ಲಿ ಯಾವುದೇ ಕಡಿಮೆಯೋ ಅಷ್ಟು ಅವಧಿಯನ್ನು ಗರಿಷ್ಠ ವಯೋಮಿತಿಯಲ್ಲಿ ವಿನಾಯಿತಿಯನ್ನು ಪರಿಗಣಿಸಲಾಗುವುದು.
4. ಅಭ್ಯಥಿಗಳು ಈಗಾಗಲೇ ಒಂದು ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದರೆ ಅಂಥವರು ಸಂಸ್ಥೆಯ ಮುಖ್ಯಸ್ಥರಿಂದ ಪಡೆದ ನಿರಪೇಕ್ಷಣಾ ಪ್ರಮಾಣಪತ್ರದೊಂದಿಗೆ (ಎನ್.ಓ.ಸಿ) ಅರ್ಜಿಗಳನ್ನು ಸಲ್ಲಿಸಬೇಕು.
5. ಆಯ್ಕೆ ಪ್ರಕ್ರಿಯೆಯನ್ನು ಯಾವುದೇ ಹಂತದಲ್ಲಾದರೂ, ಸದರಿ ಹುದ್ದೆಯ ಅನುಮತಿ ಮತ್ತು ಆಯ್ಕೆಯನ್ನು ಇಲಾಖೆ / ಸರ್ಕಾರ ಹಾಗೂ ಆಡಳಿತ ಮಂಡಳಿಯವರು ರದ್ದು ಪಡಿಸುವ ಅಧಿಕಾರವನ್ನು ಹೊಂದಿದ್ದು ಅಭ್ಯರ್ಥಿಯು ಅರ್ಜಿಯನ್ನು ಸಲ್ಲಿಸಿದ ಅಥವಾ ಸಂದರ್ಶನಕ್ಕೆ ಹಾಜರಾದ ಮಾತ್ರಕ್ಕೆ ಸದರಿ ಹುದ್ದೆಗೆ ಯಾವುದೇ ಹಕ್ಕನ್ನು ಹೊಂದಿರುವುದಿಲ್ಲ.
6. ಅರ್ಹ ಅಭ್ಯರ್ಥಿಗಳು ತಮ್ಮ ಶೈಕ್ಷಣಿಕ ಅರ್ಹತೆಯ ದೃಢೀಕೃತ ದಾಖಲೆಗಳನ್ನೊಳಗೊಂಡ ಪೂರ್ಣ ಅರ್ಜಿಯೊಂದಿಗೆ ರೂ : 2000 ಗಳ ರಾಷ್ಟ್ರೀಕೃತ ಬ್ಯಾಂಕ್ ಡಿ.ಡಿ ಯನ್ನು "ಕಾರ್ಯದರ್ಶಿಗಳು ಬಿ.ಎ.ಜೆ.ಎಸ್.ಎಸ್. ಮಹಿಳಾ ಕಾಲೇಜ್ ರಾಣೇಬೆನ್ನೂರು" ಇವರ ಹೆಸರಿನಲ್ಲಿ ಪಡೆದು ಸಂಪೂರ್ಣ ಅರ್ಜಿಯನ್ನು ಕಾರ್ಯದರ್ಶಿಗಳು ಬಿ.ಎ.ಜೆ.ಎಸ್.ಎಸ್. ಶಿಕ್ಷಣ ಸಂಸ್ಥೆ ಶ್ರೀ. ಗಾಯತ್ರಿ ಕ್ಯಾಂಪಸ್, ಹಲಗೇರಿ ರಸ್ತೆ ರಾಣೇಬೆನ್ನೂರು – 581115 ಇವರಿಗೆ ಅಧಿಸೂಚನೆ / ಜಾಹೀರಾತು ಪ್ರಕಟವಾದ 21 ದಿನಗಳೊಳಗಾಗಿ ಖುದ್ದಾಗಿ ಅಥವಾ ಅಂಚೆ ಮೂಲಕ ಅರ್ಜಿ ಸಲ್ಲಿಸತಕ್ಕದ್ದು, ಸದರಿ ಅರ್ಜಿಯ ಒಂದು ಪ್ರತಿಯನ್ನು ಜಂಟೀ ನಿರ್ದೇಶಕರು ಕಾಲೇಜು ಶಿಕ್ಷಣ ಇಲಾಖೆ ಮಿನಿ ವಿಧಾನಸೌಧ, ಧಾರವಾಡ ಇವರಿಗೆ ಸಲ್ಲಿಸತಕ್ಕದ್ದು.
7. ಅಪೂರ್ಣ ಅರ್ಜಿಗಳನ್ನ ಹಾಗೂ ಕೊನೆಯ ದಿನಾಂಕದ ನಂತರದ ಬಂದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
8. ಸಂದರ್ಶನ ದಿನಾಂಕವನ್ನು ಅಭ್ಯರ್ಥಿಗಳಿಗೆ ಪತ್ಯೇಕವಾಗಿ ತಿಳಿಸಲಾಗುವುದು.

ಸ್ಥಳ : ರಾಣೇಬೆನ್ನೂರು
ದಿನಾಂಕ : 17-07-2025

ಸಹಿ/ಚೇರಮನ್
ಬಿ.ಎ.ಜೆ.ಎಸ್.ಎಸ್. ರಾಣೇಬೆನ್ನೂರು

ಸಹಿ/ಕಾರ್ಯದರ್ಶಿ
ಬಿ.ಎ.ಜೆ.ಎಸ್.ಎಸ್.ರಾಣೇಬೆನ್ನೂರು
9448068095

Scanned with OKEN Scanner